# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

| | | | | | |
|---|---|---|---|---|---|
| | | | | | |

ಹೆಸರು :

## ಪಿಎಸ್‌ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**

**ಅಂಕಗಳು : 100**

ಮೊಬೈಲ್ ನಂ :

**15-08-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

**1. ಭಾರತದ ಚುನಾವಣಾ ಸುಧಾರಣೆಗಳು**

**ಅಥವಾ**

**2. ಹವಾಮಾನ ಬದಲಾವಣೆ**

**ಅಥವಾ**

**3. ರೈತರ ಆದಾಯ ದ್ವಿಗುಣಗೊಳಿಸುವಿಕೆ**

**ಅಥವಾ**

**4. ರೈತರ ಆತ್ಮಹತ್ಯೆ**

**ಅಥವಾ**

**5. ಸಮೂಹ ಮಾಧ್ಯಮಗಳು**

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಹೆಸರಲ್ಲೇನಿದೆ?' : ಎಲಿಜಬೆತ್ ಯುಗದ ಶ್ರೇಷ್ಠ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್ ಕೇಳಿದ್ದ ಅತ್ಯಂತ ಪ್ರಸಿದ್ಧ ಪ್ರಶ್ನೆ ಇದು. ಹೆಸರಲ್ಲಿ ಏನು ಇಲ್ಲ. ಇರುವುದೆಲ್ಲವೂ ಸತ್ವದಲ್ಲಿ ಎಂಬುದನ್ನು ಸೂಚಿಸುವುದು ಈ ಪ್ರಶ್ನೆಯ ಉದ್ಧೇಶವಾಗಿತ್ತು. ಹಾಗಿದ್ದರೂ ಸಾಮಾಜಿಕ ಮತ್ತು ರಾಜಕೀಯ ಅಸ್ಮಿತೆಯ ಪ್ರಬಲ ಪ್ರತಿಪಾದನೆಗಾಗಿ ನಾಮಕರಣ ಮತ್ತು ಮರುನಾಮಕರಣವನ್ನು ನಾವು ನೋಡುತ್ತಿದ್ದೇವೆ. ಪ್ರಜಾಸತ್ತಾತ್ಮಕ ಆಗಿರಲಿ ನಿರಂಕುಶವಾಗಿರಲಿ, ಸರ್ಕಾರಗಳು ಬರುತ್ತವೆ–ಹೋಗುತ್ತವೆ. ಅದರಂತೆಯೇ, ಸಾರ್ವಜನಿಕ ಸ್ಥಳಗಳು, ಸಂಕೇತಗಳು, ಪ್ರತಿಮೆಗಳು ಮತ್ತು ಸಂಸ್ಥೆಗಳಿಗೆ ಹೆಸರು ಇರಿಸುವುದು ಅಥವಾ ಹೆಸರು ಬದಲಿಸುವುದು ನಡೆಯುತ್ತಲೇ ಇರುತ್ತದೆ. 'ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ'ಯ ಹೆಸರನ್ನು 'ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ' ಎಂದು ಬದಲಾಯಿಸಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ. ಈ ಚರ್ಚೆಯಿಂದಾಗಿ, ಇತ್ತೀಚೆಗೆ ಎರಡು ಕ್ರೀಡಾಂಗಣಗಳ ಹೆಸರು ಬದಲಾವಣೆಯತ್ತ ವಿಮರ್ಶಕರು ಬೊಟ್ಟು ಮಾಡಿದ್ದಾರೆ. ಅಹಮದಾಬಾದ್‌ನ 'ಸರ್ದಾರ್ ವಲ್ಲಭಭಾಯ್ ಪಟೇಲ್ ಕ್ರೀಡಾಂಗಣ'ದ ಹೆಸರನ್ನು 'ನರೇಂದ್ರ ಮೋದಿ ಕ್ರೀಡಾಂಗಣ' ಎಂದು ಈ ವರ್ಷವಷ್ಟೇ ಬದಲಾಯಿಸಲಾಗಿದೆ. ಅದಕ್ಕೂ ಮೊದಲು, ದೆಹಲಿಯ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದ ಹೆಸರನ್ನು ಅರುಣ್ ಜೇಟ್ಲಿ ಕ್ರೀಡಾಂಗಣ ಎಂದು ಬದಲಾಯಿಸಲಾಗಿತ್ತು!

ಇದಕ್ಕೂ ಮೊದಲು, ಜನಸಂಘದ ಸ್ಥಾಪಕ ದೀನದಯಾಳ್ ಉಪಾಧ್ಯಾಯ ಅವರ ಹೆಸರು ಈಗಿನ ಸರ್ಕಾರಕ್ಕೆ ಅತ್ಯಂತ ಅಚ್ಚುಮೆಚ್ಚಾಗಿತ್ತು.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

## III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.

## Translate the following paragraph from English to Kannada.

**The Election Laws (Amedment) Bill, 2006 seeks to amend the Represention of the People's Act, 1950 and the delimitation Act, 2002. These Acts regulate allocation of seats to the national and state legislatures and delimitation(i.e fixing boundaries) of parliamentary and assembly constituencies. The Bill aims to empower the election Commission to carry out delimitation in 100 areas that were affeced by the enactment of the Constitution (100the amendment) Act,2015. Under the Acts, Enclaves were exchanged between India and Bangladesh. The Bill amends the Acts in order to give additional powers and responsibilities to the Election mission. It states that the Election Commission may amend the delimitation order to:**

*** Exclude from the relevant constituenclies in the Indian enclaves that were transferred to Bangladesh.**

*** Include in the relevant constituencies the Bangaledeshi enclaves that were transferred to India.**

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಮನುಷ್ಯನ ಬದುಕೇ ಸಂಘರ್ಷದ ಬದುಕು ಅಂದುಕೊಳ್ಳುತ್ತೇವೆ. ಹಾಗೇ ನೋಡಿದರೆ, ಇಡೀ ಬ್ರಹ್ಮಾಂಡದಲ್ಲಿರುವ ಜೀವಿಗಳೆಲ್ಲ ಒಂದಕ್ಕೊಂದು ಸಂಘರ್ಷಿಸಿಕೊಂಡೇ ಬದುಕುತ್ತಿವೆ. ಜೀವಕಾಯಗಳಷ್ಟೇ ಅಲ್ಲ. ಆಕಾಶಕಾಯಗಳು ಸಹ ಪರಸ್ಪರ ಘರ್ಷಣೆಯಲ್ಲೆ ಚಲಿಸುತ್ತಿವೆ. ಒಂದರ ಉಳಿವು. ಇನ್ನೊಂದರ ಅಳಿವು ಈ ಜಗದ ನಿಯಮ. ಈ ಸಂಘರ್ಷ ಸಹ ಭಗವಂತನ ಮಾಯಾಜಾಲ. ಇಲ್ಲಿ ಅಳಿದಿದೆ ಎನ್ನುವುದು ಅಳಿದಿರುವುದಿಲ್ಲ. ಉಳಿದಿದೆ ಅನ್ನುವುದು ಉಳಿದಿರುವುದಿಲ್ಲ. ಉದಾ: ಬಿಸಿಲಿನ ಸಂಘರ್ಷಕ್ಕೆ ನೀರು ಆವಿಯಾಗುವಾಗ ಅಳಿಯಿತು ಅನಿಸುತ್ತೆ, ಅದು ಮಳೆಯಾಗಿ ಸುರಿದಾಗ ಉಳಿದಂತೆ ಕಾಣುತ್ತೆ, ಇದೇ ಸೃಷ್ಟಿಯ ಚಮತ್ಕಾರ.

ನಾವು ಬದುಕಿನಲ್ಲಿ ಯಾವುದನ್ನು ಕಳೆದುಕೊಂಡೆವು ಮತ್ತು ಯಾವುದನ್ನು ಉಳಿಸಿಕೊಂಡೆವು ಅನ್ನುವುದು ಬಹಳ ಮುಖ್ಯ.. ಒಳ್ಳೆಯದನ್ನು ಗಳಿಸಿ, ಕೆಟ್ಟದ್ದನ್ನು ಕಳೆದುಕೊಂಡೆವು ಅಂದಾಗ ನಮ್ಮ ಬದುಕು ಸಾರ್ಥಕ. ಅದೇ ಒಳ್ಳೆಯದನ್ನು ಕಳೆದುಕೊಂಡು, ಕೆಟ್ಟದ್ದನ್ನು ಪಡೆದೆವೆಂದರೆ ನಾವು ನೆಮ್ಮದಿಯನ್ನು ಕಳೆದುಕೊಂಡು, ಕಷ್ಟಗಳನ್ನು ಮೈಮೇಲೆ ಎಳೆದುಕೊಂಡೆವೆಂದೇ ಅರ್ಥ. ಮನುಷ್ಯ ಮೂರು ವಿಭಾಗಗಳಲ್ಲಿ ಸಂಘರ್ಷಿಸಬೇಕು. ಆ ನಿತ್ಯಕದನದಲ್ಲಿ ಗೆಲುವು ಮೂಡಿಸುತ್ತಾ ಹೋದಾಗಲೇ ನಮ್ಮ ಜೀವ–ಜೀವನ–ನೆಮ್ಮದಿ ಉಳಿದುಕೊಂಡಿರುತ್ತದೆ. ಆ ಮೂರು ಸಂಘರ್ಷದ ಭೂಮಿಕೆ ಯಾವುದೆಂದರೆ ದೇಹ–ಮನಸ್ಸು–ಬಾಹ್ಯಜಗತ್ತು.

ದೇಹದೊಳಗಿನ ಜೀವಾಣುಗಳೊಂದಿಗೆ ನಾನಾ ರೋಗಾಣುಗಳು ಸಂಘರ್ಷಿಸುತ್ತಿರುತ್ತವೆ. ಮನಸ್ಸಿನ ನಿಷ್ಕಲ್ಮಷ ತಿಳಿಗೊಳದಲ್ಲೂ ನಾನಾ ಭಾವಗಳು ಅಪ್ಪಳಿಸುತ್ತಿರುತ್ತವೆ. ಬಾಹ್ಯದ ಬದುಕಲ್ಲೂ ನಾನಾ ಜನ, ನಾನಾ ರೀತಿಯಲ್ಲಿ ಬರುತ್ತಿರುತ್ತಾರೆ.